ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಹಣಕಾಸಿನ ದುರುಪಯೋಗ ಹಾಗೂ ಅಶಿಸ್ತಿನ ಪ್ರಕರಣಗಳು

೧೪೫. ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ೧೯೮೯–೧೯೯೦ನೇ ಸಾಲಿನಲ್ಲಿ ಅಧಿಕಾರಿ ವರ್ಗ ಮತ್ತು ನೌಕರ ವರ್ಗದ ಎಷ್ಟು ಜನರ ಮೇಲೆ ಹಣಕಾಸಿನ ದುರುಪಯೋಗ ಹಾಗೂ ಅಶಿಸ್ತಿನ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಆ) ಹಾಗಿದ್ದಲ್ಲಿ ಅವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು ? (ಡಿವಿಜನ್‌ವಾರು ಅಂಕಿ ಅಂಶಗಳನ್ನು ನೀಡುವುದು).

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಸುಮಾರು ೫೨೬ ಪ್ರಕರಣಗಳು ಅಶಿಸ್ತಿನ ಹಣ ಸೋರುವಿಕೆ ಮತ್ತು ೭೭೧ ಪ್ರಕರಣಗಳು ಹಣಕಾಸಿನ ದುರುಪಯೋಗಕ್ಕೆ ಸಂಬಂಧಿಸಿದಂತೆ ಮೂರನೇ ದರ್ಜೆ ಮತ್ತು ನಾಲ್ಕನೇ ದರ್ಜೆ ನೌಕರರ ಮೇಲೆ ವರದಿಯಾಗಿದೆ. ಸುಮಾರು ೨೯ ಪ್ರಕರಣಗಳು ಅಶಿಸ್ತಿನ ಬಗ್ಗೆ ಮತ್ತು ನಾಲ್ಕು ಪ್ರಕರಣಗಳು ಹಣದ ದುರುಪಯೋಗದ ಬಗ್ಗೆ ಅಧಿಕಾರಿ ವರ್ಗದ ಮೇಲೆ ವರದಿಯಾಗಿರುತ್ತದೆ.

ಆ) ಕ್ರಮ ತೆಗೆದುಕೊಂಡ ಬಗ್ಗೆ ಲಗತ್ತಿಸಿದ ಪಟ್ಟಿಯಲ್ಲಿ ವಿವರಿಸಲಾಗಿದೆ.

Sl. No.	Division	Pilferage Indiscipline.	Misaeppro-priation.	Total	Dismissal/ removal	With-holding of increment.	Reduetion to lower time scale of pay.	Fine	Censure	Recovery	Suspension Ftc. Warning Reprimanded KOD-ETC.,
1	B. T. S.	26.006	84	26,090	16	1501	85	5640	14,633	14	216
2	Bangalore	2,887	9	2,896	4	486	263	1286	129	580	—
3	Mysore	3,667	391	4,058	1	679	165	1328	54	173	553
4	Hassan	3,663	93	3 756	10	143	577	1	54	1352	776
5	Mangalore	1,913	23	1,936	7	384	61	385	99	703	2
6	Kolar	3,396	24	3,420	49	603	313	19	109	404	1908
7	Bellary	1,381	98	1,479	12	683	35	—	21	491	360
8	Raichur	1,488	1	1,489	2	582	3	—	95	2	213
9	Gulbarga	2,029	—	2,029	6	141	8	2	2	400	234
10	Bijapur	1,114	—	1,114	5	131	201	53	178	105	138
11	Belgaum	1,784	48	1.832	9	399	69	357	124	139	409
12	N. K. Sir i	1,042	—	1,042	—	316	115	243	85	72	188
13	Hubli	2,047	—	2,047	31	539	114	102	50	334	385
14	RWS, Bangalore	93	—	193	—	28	—	—	—	—	6
15	RWS, Hubli	132	—	132	—	25	9	18	16	4	—
	Total	52,642	771	53,413	152	6640	2018	9434	15,699	4829	5388

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸಾರಿಗೆ ಮಂತ್ರಿಗಳಿಗೆ, ನಾನು ಇನ್ನೆ ಹೇಳಿದಹಾಗೆ, ಸಾರಿಗೆ ಸಂಸ್ಥೆಯ ಅಧಿಕಾರಿವರ್ಗದವರು ಬಹಳ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆಶ್ಚರ್ಯಕರವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಸಾರಿಗೆ ಸಂಸ್ಥೆಯಲ್ಲಿ ಒಟ್ಟು ೫೦ ಅಥವಾ ೫೫ ಸಾವಿರ ಕಾರ್ಮಿಕರು ಇರಬಹುದು. ಇವರು ಇನ್‌ಡಿಸಿಪ್ಲಿನ್, ಫಿಲ್‌ಫರೇಜ್ ಕೇಸುಗಳನ್ನು ಹಾಕಿರತಕ್ಕಂಥಾದ್ದು ೫೨,೬೪೨. ಅಂದರೆ ಒಂದು ವರ್ಷದಲ್ಲಿ ಪ್ರತಿಯೊಬ್ಬ ಎಂಪ್ಲಾಯಿ ಮೇಲೆ ಫಿಲ್‌ಫರೇಜ್ ಕೇಸ್ ಬುಕ್ ಮಾಡಿರುತ್ತಾರೆ. ಇದನ್ನು ತಾವು ದಯವಿಟ್ಟು ಹೇಳಬೇಕು. ಇದು ಒಂದು ವರ್ಷದಲ್ಲೋ ಅಥವಾ ಕಳೆದ ೨೫ ವರ್ಷಗಳಲ್ಲೋ ಎಂಬುದನ್ನು ಹೇಳಬೇಕು. ೫೨,೬೪೨ ಕೇಸ್‌ಗಳನ್ನು ಬುಕ್ ಮಾಡಿ ನೀವು ಎಷ್ಟು ಜನಕ್ಕೆ ಡಿಸ್‌ಮಿಸ್ ಮಾಡಿರುತ್ತೀರಿ, ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಂಡಿರುತ್ತೀರಿ ಎಂದರೆ ೧೫೨ ಜನಕ್ಕೆ ಇದಕ್ಕೆ ಕಾರಣ ಏನು? ಮೂರನೆಯದಾಗಿ, ಬಿ.ಟಿ.ಎಸ್. ಒಂದರಲ್ಲೆ ಸುಮಾರು ೧೦ ಸಾವಿರ ಜನ ಎಂಪ್ಲಾಯಿಸ್ ಇದ್ದಾರೆ. ಅವರ ಮೇಲೆ ೨೬ ಸಾವಿರ ಕೇಸ್‌ಗಳನ್ನು ಹಾಕಿದ್ದೀರಿ. ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಂಡಿರುವುದು ೧೬ ಜನರ ಮೇಲೆ ಮಾತ್ರ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಿಮಗೆ ಗೊತ್ತಾಗುವುದಿಲ್ಲ. ಅಲ್ಲಿನ ಅಧಿಕಾರಿಗಳು ಮಾಮೂಲು ಮಾಡಿಕೊಂಡಿರುತ್ತಾರೆ. ಇದರಲ್ಲಿ ಅಧಿಕಾರಿಗಳು ಕೇಸ್ ಬುಕ್ ಮಾಡುವುದು, ದುಡ್ಡು ತೆಗೆದುಕೊಳ್ಳುವುದು ಈ ವ್ಯವಹಾರವನ್ನು ನಡುಸುತ್ತಿದ್ದಾರೆ. ನಿಮ್ಮ ಸರ್ಕಾರ ಇವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನಾದರೂ ನಿಸ್ಸಹಾಯಕರಾಗಿದ್ದೀರಾ ಹೇಗೆ ? ಇವರ ಮೇಲೆ ತಾವು ಏತಕ್ಕೆ ಶಿಸ್ತಿನ ಕ್ರಮ ತೆಗೆದುಕೊಂಡಿಲ್ಲ? ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೀರಾ ಹೇಗೆ? ತಾವು ರಿಕವರಿ ಮಾಡಿದ್ದೇವೆಂದು ಹೇಳಿದ್ದೀರಿ. ಇಲ್ಲಿ ಸುಮಾರು ೫೨ ಸಾವಿರ ಕೇಸ್‌ಗಳನ್ನು ಬುಕ್ ಮಾಡಿ ೪೮೬೫ರಲ್ಲಿ ಮಾತ್ರ ರಿಕವರಿ ಮಾಡಿದ್ದೀರಿ. ಇದು ಎಷ್ಟೊಂದು ಶೋಚನೀಯವಾದ ಪರಿಸ್ಥಿತಿ ಎನ್ನುವುದನ್ನು ತಾವು ನೋಡಿ. ಸಾರಿಗೆ ಇಲಾಖೆಯು ಅಧ್ಯಕ್ಷರಿಗೆ ಮತ್ತು ಮಂತ್ರಿಗಳಿಗೆ ಏತಕ್ಕೆ ಇಂತಹ ಪರಿಸ್ಥಿತಿ ಬಂತು ? ಬಿ.ಟಿ.ಎಸ್.ನಲ್ಲಿ ಮಾತ್ರ ೨೬ ಸಾವಿರ ಕೇಸ್‌ಗಳನ್ನು ಹಾಕುವುದಕ್ಕೆ ಕಾರಣವೇನು ? ದಯವಿಟ್ಟು ತಾವು ತಿಳಿಸಬೇಕು. ಮತ್ತೆ ನನ್ನ ಇನ್ನೊಂದು ಪ್ರಶ್ನೆಗೆ ಉತ್ತರವೇ ಬಂದಿಲ್ಲ ನಾನು ಕೇಳಿದ್ದುದು ಎಷ್ಟು ಜನ ಅಧಿಕಾರಿಗಳ ಮೇಲೆ ಕೇಸ್ ಹಾಕಿದ್ದೀರಿ ಎಂದು. ಪಾಪ ಯಾರೋ ಒಬ್ಬ ಕಂಡಕ್ಟರ್ ಮತ್ತು ಡ್ರೈವರ್ಸ್ ಮೇಲೆ ತಾವು ೫೨ ಸಾವಿರ ಕೇಸ್‌ಗಳನ್ನು ಹಾಕಿದ್ದೇವೆಂದು ಹೇಳಿದ್ದೀರಿ. ಈ ಹೆಗ್ಗಣಗಳ ಮೇಲೆ ತಾವು ಏತಕ್ಕೆ ಕೇಸ್‌ಗಳನ್ನು ಹಾಕಿಲ್ಲ. ಅಧಿಕಾರಿಗಳ ಮೇಲೆ ಒಂದೂ ಕೇಸ್ ಹಾಕದೆ ಇರುವುದಕ್ಕೆ ಕಾರಣವೇನು ? ದಯವಿಟ್ಟು ನನಗೆ ತಿಳಿಸಬೇಕು ?

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರಿಗೆ ಗೊತ್ತು. ಈ ೫೨,೬೪೨ ಪ್ರಕರಣಗಳು ಅಂದರೆ ಜನ ಅಲ್ಲ. ಒಬ್ಬರ ಮೇಲೆ ಜಾಸ್ತಿ ಕೇಸ್‌ಗಳು ಇರಬಹುದು. ನಮ್ಮ ಸರ್ಕಾರ ಬಂದ ಮೇಲೆ ಈ ಪ್ರಕರಣಗಳು ಪೆಂಡಿಂಗ್ ಇರುವುದನ್ನು ನೋಡಿ. ಒಂದು ಕಮಿಟಿಯನ್ನು ಜನರಲ್ ಮ್ಯಾನೇಜರ್, ಟೆಕ್ನಿಕಲ್ ಇವರ ಅಧ್ಯಕ್ಷತೆಯಲ್ಲಿ ರಚನೆ ಮಾಡಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಜನರಲ್ ಮ್ಯಾನೇಜರ್, ಟೆಕ್ನಿಕಲ್ ಎನ್ನುವ ಪೋಸ್ಟ್ ಇಲ್ಲ ಈಗ ಹೊಸದಾಗಿ ಏನಾದರೂ ಆ ಪೋಸ್ಟ್‌ನ್ನು ಕ್ರಿಯೇಟ್ ಮಾಡಿದ್ದೀರಾ ?

ಶ್ರೀ ಕೆ. ಜೆ. ಜಾರ್ಜ್.—ಶ್ರೀಮಾನ್ ವೆಂಕಟಾಚಲಪತಿಯವರ ನಾಯಕತ್ವದಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ್ದೇವೆ. ಅವರು ರಿಪೋರ್ಟ್ ಕೊಡುವವರಿದ್ದಾರೆ. ಇಲ್ಲಿ ಸಣ್ಣ ಪುಟ್ಟ ಕೇಸ್‌ಗಳು ತುಂಬಾ ಇವೆ. ಬರೀ ಹಣ ಸೋರುವಿಕೆಗೆ ಸಂಬಂಧಪಟ್ಟವುಗಳು ಮಾತ್ರವಲ್ಲ, ಶಿಸ್ತಿಗೆ ಸಂಬಂಧಪಟ್ಟ ಕೇಸ್‌ಗಳು ಸಹ ಇವೆ. ಹಣ ದುರುಪಯೋಗ ಮಾಡಿರುವ ಕೇಸ್‌ಗಳು ಸಹ ಇವೆ. ಇಂತಹ ಹಲವಾರು ಕೇಸ್‌ಗಳು ಮತ್ತು ಬೇರೆ ಬೇರೆ ರೀತಿಯ ಕೇಸ್‌ಗಳೂ ಇವೆ. ಆ ಬಗ್ಗೆ ಬೇಕಾದರೆ ಮಾನ್ಯ ಸದಸ್ಯರಿಗೆ ನಾನು ಮಾಹಿತಿ ಕೊಡುತ್ತೇನೆ ನಾವು ಒಂದು ಕಮಿಟಿಯನ್ನು ರಚನೆ ಮಾಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ನಮ್ಮಲ್ಲಿರುವ ಸೀನಿಯರ್ ಆಫೀಸರ್ಸ್‌ನ್ನು ಯಾವ ಯಾವ ಡಿವಿಜನ್‌ನಲ್ಲಿ ಹೆಚ್ಚು ಕೇಸ್‌ಗಳು ಪೆಂಡಿಂಗ್ ಇವೆ ಅವರನ್ನು ಅಲ್ಲಿಗೆ ಕಳುಹಿಸಿಬಿಟ್ಟು ಆದಷ್ಟು ಬೇಗ ಕೇಸ್‌ಗಳನ್ನು ತೀರ್ಮಾನ ಮಾಡಬೇಕೆನ್ನುವ ಆದೇಶವನ್ನು ನಾನು ಕೊಟ್ಟಿದ್ದೇನೆ. ಸಣ್ಣ ಪುಟ್ಟ ಕೇಸ್‌ಗಳನ್ನು ಅಲ್ಲಿನ ಡಿ. ಸಿ. ಎನ್‌ಕ್ವೈರಿ ಮಾಡಬೇಕಾಗುತ್ತದೆ. ಅದರ ಬದಲು ನಾವು ಈಗ ಅಲ್ಲಿನ ಡಿಪೋ ಮ್ಯಾನೇಜರ್ಸ್ ಮತ್ತು ಡಿ.ಎಂ.ಇಗೆ ಹಾಗೂ ಡಿ.ಟಿ.ಓ. ರವರೇ ಕೇಸ್‌ಗಳನ್ನು ಎನ್‌ಕ್ವೈರಿ ಮಾಡಿ ಆದಷ್ಟು ಬೇಗ ಕೇಸ್‌ಗಳನ್ನು ತೀರ್ಮಾನ ಮಾಡುವಂತೆ ಈಗಾಗಲೇ ಕ್ರಮವಹಿಸಿಕೆ ಗೊಳ್ಳುವವರಿದ್ದೇವೆ. ಮತ್ತೆ ಆಫೀಸರ್ಸ್ ಮೇಲೆ ಎಷ್ಟು ಕೇಸ್‌ಗಳನ್ನು ಹಾಕಿದ್ದೀರಿ ಎಂದು ತಾವು ಕೇಳಿದಿರಿ. ಸುಮಾರು ೨೯ ಪ್ರಕರಣಗಳು ಆಫೀಸರ್ಸ್ ಮೇಲೆ ಬಂದಿವೆ. ಅವರ ವಿಚಾರಣೆ

ನಡೆಯುತ್ತಿದೆ. ಈಗಾಗಲೇ ನಾವು ಒಬ್ಬರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಸರ್ವೀಸ್‌ನಿಂದ ತೆಗೆದಿದ್ದೇವೆ. ಎನ್‌ಕ್ವೈರಿ ಮುಗಿದ ಕೂಡಲೇ ಅವರು ಏನು ರೆಕಮೆಂಡ್ ಮಾಡಿರುತ್ತಾರೋ ಆ ಪ್ರಕಾರ ಆಕ್ಷನ್ ತೆಗೆದುಕೊಂಡಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನ್ಯ ಸಚಿವರಿಂದ ಉತ್ತರ ಬಯಸಿದ್ದುದು ಜಾಸ್ತಿ ಕೇಸ್‌ಗಳನ್ನು ಬಿ.ಟಿ.ಎಸ್.ನಲ್ಲಿ ಏತಕ್ಕೆ ಹಾಕಿದ್ದೀರಿ ಎನ್ನುವುದಕ್ಕೆ. ಒಟ್ಟು ೫೨ ಸಾವಿರ ಪ್ರಕರಣಗಳಿದೆಯೆಂದು ತಾವು ಹೇಳಿದಿರಿ. ಈ ೫೨ ಸಾವಿರ ಪ್ರಕರಣಗಳನ್ನು ಒಂದೇ ವರ್ಷದಲ್ಲಿ ಹಾಕಿದ್ದೀರಾ ಹೇಗೆ ? ಇದರಲ್ಲಿ ಬಿ.ಟಿ.ಎಸ್. ಮೇಲೆ ೨೬ ಸಾವಿರ ಕೇಸ್‌ಗಳನ್ನು ಹಾಕಲು ಕಾರಣವೇನು ? ಅದಕ್ಕೆ ನಾನು ಮೊದಲೇ ಹೇಳಿದ್ದು, ತಾವು ಈಗ ಏನೋ ಎನ್‌ಕ್ವೈರಿ ಮಾಡುವ ಸಲುವಾಗಿ ಡಿಪೋ ಮ್ಯಾನೇಜರ್‌ಗೆ ಮತ್ತು ಡಿ.ಟಿ.ಒ. ಹಾಗೂ ಡಿ, ಎಂ. ಒ. ಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುವ ಯೋಚನೆ ಮಾಡುತ್ತಿರುವ ಸಂದರ್ಭದಲ್ಲಿ ಸ್ವಲ್ಪ ಯೋಚನೆ ಮಾಡಿ ಅಧಿಕಾರ ಕೊಡಬೇಕಾಗುತ್ತದೆ. ತಾವು ಜನರಲ್ ಮ್ಯಾನೇಜರ್, ಟೆಕ್ನಿಕಲ್ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡುತ್ತಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. That is a right decission you have taken. ಆದರೆ ಪವರ್ಸ್ ಡೆಲಿಗೇಟ್ ಮಾಡಬೇಕು ಎಂದು ಇದ್ದೀರಲ್ಲ ಅದರಲ್ಲಿ ರಾಕೆಟಿಂಗ್ ಇಡುವುದು, ಈಗ ೨೬ ಸಾವಿರ ಕೇಸ್‌ಗಳನ್ನು ಹಾಕಿರುವ ಉದ್ದೇಶ ದುಡ್ಡು ಮಾಡಿಕೊಳ್ಳುವುದಕ್ಕೆ. ಅವರು ಕೇಸ್‌ನ ಮೆರಿಟ್ ಮೇಲೆ ತೀರ್ಮಾನ ಮಾಡುವುದಿಲ್ಲ. ಅವರು ದುಡ್ಡು ವಸೂಲಿ ಮಾಡಿಕೊಂಡು ಕೇಸ್‌ಗಳನ್ನು ಬೇಗ ತೀರ್ಮಾನ ಮಾಡುತ್ತಾರೆ, ಇದಕ್ಕೆ ತಾವು ಉತ್ತರ ಕೊಡಬೇಕು. ಇಲ್ಲಿ ಜಾಸ್ತಿ ಕೇಸ್‌ಗಳನ್ನು ಹಾಕತಕ್ಕಂಥ ಅಗತ್ಯ ಇಲ್ಲ. ದುಡ್ಡು ಹೊಡೆಯುವುದಕ್ಕೆ ಕೇಸ್ ಬುಕ್ ಮಾಡುತ್ತಾರೆ. ಮತ್ತೆ ತಾವು ೨೯ ಅಧಿಕಾರಿಗಳ ಪ್ರಕರಣ ಪತ್ತೆಯಾಗಿದೆ ಎಂದು ಹೇಳಿದಿರಿ. ನನಗೆ ಗೊತ್ತಿರುವ ಹಾಗೆ ಈ ಸರ್ಕಾರ ಬಂದ ಮೇಲೆ ಯಾವ ಅಧಿಕಾರಿಗಳ ಮೇಲೆ ಸೀರಿಯಸ್ ಮಿಸ್ ಅಪ್ರೊಪ್ರಿಯೇಷನ್ ಚಾರ್ಜಸ್ ಇತ್ತು ಅವರನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಿದ್ದೀರಿ. ಇಬ್ಬರು ಅಧಿಕಾರಿಗಳನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಿದ್ದೀರಿ. ಯಾರನ್ನು ಕೆ.ಎಸ್.ಆರ್.ಟಿ.ಸಿ.ಯಿಂದ ತೆಗೆದು ಮನೆಗೆ ಕಳುಹಿಸಬೇಕು ಎನ್ನುವ ಹಂತದಲ್ಲಿ ಅವರನ್ನು ಕಂಟ್ರೋಲ್ ಮಾಡುವ ಸ್ಟೇಜ್‌ನಲ್ಲಿ ನೀವು ಹಾಕಿದ ಮೇಲೆ ಹೇಗೆ ಅದನ್ನು ಸರಿ ಮಾಡುವುದಕ್ಕೆ ಆಗುತ್ತದೆ ದಯವಿಟ್ಟು ತಾವು ಅದಕ್ಕೆ ಉತ್ತರ ಕೊಡಬೇಕು.

ಶ್ರೀ ಕೆ.ಜೆ. ಜಾರ್ಜ್.— ಮಾನ್ಯ ಅಧ್ಯಕ್ಷರೇ, ೫೨ ಸಾವಿರ ಕೇಸ್‌ಗಳಲ್ಲಿ ೧೪,೬೪೦ ಜನ ಎಂಪ್ಲಾಯಿಸ್ ಇನ್‌ವಾಲ್ವ್ಡ್ ಆಗಿದ್ದಾರೆ. ಬಿ.ಟಿ.ಎಸ್.ನಲ್ಲಿ ಹೆಚ್ಚು ಕೇಸ್‌ಗಳು ಏಕೆ ಆಗಿವೆ ಎಂದು ಅವುಗಳ ಬಗ್ಗೆ ಹೇಳಬೇಕಾದರೆ ತುಂಬಾ ಇದೆ. ಅದನ್ನು ಓದಬೇಕೆಂದು ತಾವು ಹೇಳಿದರೆ ನಾನು ಓದುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಓದುವುದು ಬೇಡ.

ಶ್ರೀ ಕೆ.ಜೆ. ಜಾರ್ಜ್.— ನಾನು ಹೇಳಿದ್ದೇನೆ. ಯಾರ ಮೇಲೆ ಎನ್‌ಕ್ವೈರಿ ಪೆಂಡಿಂಗ್ ಇದೆಯೋ enquiry is not a punishment and it is not a bar for the promotion ಅವರಿಗೆ ಪ್ರಮೋಷನ್ ಕೊಟ್ಟಿಲ್ಲ. ವೇಕೆನ್ಸಿ ಇದ್ದುದರಿಂದ ಟೆಂಪೊರರಿ ಪ್ರಮೋಷನ್ ಕೊಟ್ಟಿದ್ದೇವೆ. ಎನ್‌ಕ್ವೈರಿಯನ್ನು ಎಕ್ಸ್‌ಪಿಡೈಟ್ ಆಂದರೆ ಆದಷ್ಟು ಬೇಗ ಮಾಡುವುದಕ್ಕೆ ನಾನು ಹೇಳಿದ್ದೇನೆ. ಎನ್‌ಕ್ವೈರಿ ರಿಪೋರ್ಟ್‌ನಲ್ಲಿ ಏನು ಬರುತ್ತದೆಯೋ ಅದನ್ನು ನೋಡಿಕೊಂಡು ಕ್ರಮ ತೆಗೆದು ಕೊಳ್ಳುತ್ತೇವೆ. ಅವರು ಯಾರೇ ಆಗಿರಲಿ ಅವರ ಮೇಲೆ ಕ್ರಮತೆಗೆದುಕೊಳ್ಳುತ್ತೇವೆ. ಅಲ್ಲಿ ನಮ್ಮ ನೆಂಟರು ಯಾರೂ ಇಲ್ಲ ಎನ್‌ಕ್ವೈರಿ ರಿಪೋರ್ಟ್ ಬರುವ ತನಕ ನಾವು ವೈಟ್ ಮಾಡೋಣ. ಎನ್‌ಕ್ವೈರಿ ರಿಪೋರ್ಟ್ ಬಂದ ಮೇಲೆ ಅದರ ಮೇಲೆ ಕ್ರಮ ತೆಗೆದು ಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ — ನಾನು ಏನು ಹೇಳುತ್ತಿದ್ದೇನೆಂದರೆ, ಯಾರ ಮೇಲೆ ಎನ್‌ಕ್ವೈರಿ ಇದೆಯೋ ಅವರಿಗೇ ಪ್ರಮೋಷನ್ ಕೊಡಲಾಗಿದೆ. I do agree that enquiry is not a punishment. ಅವರನ್ನು ಪ್ರಮೋಷನ್ ಮಾಡಿ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಿದ್ದಾರೆ. ಅವರನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡುವುದಕ್ಕೆ ಹೇಗೆ ಸಾಧ್ಯ? ಪರ್ಟಿಕ್ಯುಲರ್ ಆಗಿ ಕೆ.ಎಸ್.ಆರ್.ಟಿ.ಸಿ.ಯ ನರನಾಡಿ ಎಲ್ಲಿದೆಯೋ ಆ ಜಾಗದಲ್ಲಿ ಅವರನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಲಾಗಿದೆ. ವರ್ಷಕ್ಕೆ ಳಿಗೆ ಕೋಟಿ ರೂಪಾಯಿಗಳ ವ್ಯವಹಾರ ನಡೆಯುವಂಥ ಜಾಗದಲ್ಲಿ ಖದೀಮರಿಗೆ ಸ್ಥಳಾವಕಾಶ ಮಾಡಿಕೊಟ್ಟಿದ್ದೀರಿ. ಕೆ. ಎಸ್. ಆರ್. ಟಿ. ಸಿ.ಯಿಂದಲೇ

ಅಂಥವರನ್ನು ಹೊರಗೆ ಕಳುಹಿಸಬೇಕಾಗಿತ್ತು. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕುವುದಕ್ಕೆ ನಾನು ಆ ಖಾತೆಯ ಮಂತ್ರಿಯಾಗಿದ್ದಾಗ ರೆಕಾರ್ಡ್ಸನ್ನು ಡೆವಲಪ್ ಮಾಡಿದ್ದೆ. ಅವರು ಯಾವ ಮಟ್ಟಿನ ಅಧಿಕಾರಿಗಳೆಂದರೆ, ರಾಯಚೂರಿನಲ್ಲಿ ಬಸ್‌ಗಳ ರಾಷ್ಟ್ರೀಕರಣ ಆಗತಕ್ಕಂಥ ಸಂದರ್ಭದಲ್ಲಿ ಖಾಸಗಿ ಬಸ್ ಮಾಲೀಕರಿಂದ ಈ ಅಧಿಕಾರಿ ದುಡ್ಡು ತೆಗೆದುಕೊಂಡಿದ್ದರು.

SRI K.J. GEORGE.— The enquiry is pending. When that is the case if we go to the merit of the case, it may prejudice the mind of the Enquiry Officer.

SRI P.G.R. SINDHIA.— Why do you make him the Head of the Department?

SRI K.J. GEORGE.— The moral of the officers will go if we go to the merit of the case ಎನ್‌ಕ್ವೈರಿ ರಿಪೋರ್ಟ್ ಬಂದ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ. ಇನ್ನೂ ಒಂದು ವಿಷಯವನ್ನು ಮಾನ್ಯ ಸಿಂಧ್ಯಾರವರಿಗೆ ಹೇಳುತ್ತೇನೆ. ನಿಮ್ಮ ಕಾಲದಲ್ಲಿ ನಿಮ್ಮ ಸರ್ಕಾರ ಇರುವಾಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಒಬ್ಬ ಅಧಿಕಾರಿ ಮೇಲೆ ಎನ ಕ್ವಯರಿ ಯಾಗಿ ಅವರ ವಿರುದ್ಧ ರಿಪೋರ್ಟ್ ಬಂದಿದ್ದರೂ ಕೂಡ ಕ್ರಮವನ್ನು ತೆಗೆದುಕೊಂಡಿರಲಿಲ್ಲ. ಆ ಆಫೀಸರ್ ವಿರುದ್ಧ ಎನ್‌ಕ್ವಯರಿ ಜಡ್ಜ್‌ಮೆಂಟ್ ಬಂದ ಮೇಲೆ ಸಹಿತ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ನಾನು ಕೇಳುತ್ತಿಲ್ಲ. ನಾನು ಕೇಳುತ್ತಿರುವುದು ಬಹಳ ಮಹತ್ವವಾಗಿರತಕ್ಕಂಥ ಪ್ರಶ್ನೆ.

ಅಧ್ಯಕ್ಷರು.— ಡಿಮ್ಯಾಂಡ್ ಮೇಲೆ ಮಾತನಾಡುವಾಗ ಇದನ್ನು ಮಾತನಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಹಾಗಾದರೆ ಒಂದು ಮಾಡಿ, ಮಾನ್ಯ ಅಧ್ಯಕ್ಷರೇ, you suspend him till the enquiry is over. How minister cannot make him the Head of the Department. ಸೀರಿಯಸ್ ಚಾರ್ಜ್‌ಸ್ ಇರತಕ್ಕಂಥ ಆಫೀಸರ್‌ನ್ನು ಪೆಂಡಿಂಗ್ ಎನ್‌ಕ್ವಯರಿ ಎಂದು ಪ್ರಮೋಟ್ ಮಾಡಿ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಿದ್ದೇವೆ ಎನ್ನುವುದು ರಾಜ್ಯಕ್ಕೆ ಗೊತ್ತಾಗಲಿ.

ಶ್ರೀ ಆರ್. ವಿ. ದೇಶಪಾಂಡೆ.— ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿದ್ದ ಆಫೀಸರ್ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ.

SRI K.J. GEORGE.— Enquiry is not a bar. There is a rule. We have given temporary promotion. We will expedite the enquiry. We will take action on the decisions of the enquiry. In the case of Agro-Industries Corporation, even after the judgement of the enquiry, you have not taken action. When that is the case, how can you question us now?

ಕರ್ನಾಟಕದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

೩೫೫ ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು).— ಪ್ರವಾಸ್ಯ ಯೋಜನಾ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರವಾಸಿ ಸ್ಥಳಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ವಿದೇಶಿ ಹಣದ ನೆರವು ದೊರಕುವ ಸಂಭವಗಳಿ ಇರುವುದೇ?

ಇ) ಹಾಗಿದ್ದ ಪಕ್ಷದಲ್ಲಿ ಯಾವುದಿಂದ ಸಹಾಯ ನಿರೀಕ್ಷಿಸಲಾಗಿದೆ?

ಈ) ಅಂತಹ ಅಭಿವೃದ್ಧಿಗೆ ಸರ್ಕಾರವು ಗುರುತಿಸಿರುವ ಪ್ರವಾಸಿ ಸ್ಥಳಗಳು ಯಾವುವು ಮತ್ತು ಕಾರ್ಯಕ್ರಮಗಳೇನು?